# ಕೊರೊನಾ ಮತ್ತು ಅಡುಗೆ

COVID-೧೯: ಭಾರತೀಯ ವಿಜ್ಞಾನಿಗಳ ಪ್ರತಿಕಿಯೆ
(ಒಂದು ಸ್ವಯಂಪ್ರೇರಿತ ಗುಂಪು)

IndiSciCovid

https://indscicov.in/

ವಿನ್ಯಾಸ: ರೇಷ್ಮಾ ಬರ್ವೆ



Indian Scientists' Response to COVID-19

ಆಗಿನ್ನೂ ಸಂಜೆ; ಆದರೆ ನನಗಾಗಲೇ ಹಸಿವಾಗುತ್ತಿತ್ತು. “ಅಪ್ಪ, ಹಸಿವಾಗುತ್ತಿದೆ. ಇಂದು ಬಿಸಿಯಾಗಿ ನಿನ್ನ ಸ್ಪೆಷಲ್ ಚಿಕನ್ ಕರಿ ಮಾಡಿಕೊಡುವೆಯಾ ಪ್ಲೀಸ್? ಮಸಾಲೆ ಹೆಚ್ಚು ಹಾಕಿ ಮಾಡು!” ಅಂದೆ. ಅಮ್ಮ ಕೂಡ ಒಪ್ಪಿಕೊಂಡರು - “ನನಗೂ ತುಂಬಾ ಆಯಾಸವಾಗಿದೆ; ಇಂದು ನೀವು ನಿಮ್ಮ ಕರಿಯನ್ನು ಮಾಡಿಯೇಬಿಡಿ” ಎಂದರು.



“ಆಗಲಿ; ಮಾಡುತ್ತೇನೆ” ಎಂದು ಅಪ್ಪ ಸೀದಾ ಸಿಂಕ್ ನತ್ತ ಸಾಬೂನಿಂದ ಕೈಯನ್ನು ತೊಳೆಯಲು ಹೊರಟರು. ಅವರು ಸಾಬೂನು ಹಾಕಿ ಕೈ ತೊಳೆಯುವವರೆಗೂ ನಾನು 20 ಸೆಕೆಂಡ್ ಉಲ್ಟಾ ಎಣಿಸಲು ಪ್ರಾರಂಭಿಸಿದೆ.ಅಮ್ಮನೂ ನನ್ನ ಜೊತೆ ಎಣಿಸಿದರು. ಅಪ್ಪ ರೇಡಿಯೋ ಕೇಳುತ್ತಾ , ನೆಲದ ಮೇಲೆ ಕುಳಿತುಕೊಂಡು ತರಕಾರಿಯನ್ನು ಕತ್ತರಿಸಲು ಇಚ್ಛಿಸುತ್ತಾರೆ. ಆ ಬೆಳಗ್ಗೆ ರಮೇಶ್ ಅಂಕಲ್ ತಮ್ಮ ಪತ್ರಿಕೆಗಳನ್ನು ಕೊಡಲು ಮನೆಗೆ ಬಂದಾಗ ಅದೇ ಜಾಗದಲ್ಲಿ ಕುಳಿತಿದ್ದರು. ಅಪ್ಪ ಆ ಜಾಗವನ್ನು ಸಾಬೂನು ಮತ್ತು ಸ್ಪಾಂಜ್ ನಿಂದ ಸಾರಿಸಿದ್ದು ನನಗೆ ನೆನಪಾಯಿತು.ಅವರು ಕುಳಿತು ಚಿಕನ್ ಮತ್ತು ಹಸಿರು ಮೆಣಸಿನಕಾಯಿಯನ್ನು ಕತ್ತರಿಸಲು ಪ್ರಾರಂಭಿಸಿದರು. “ಇನ್ನೂ ಸ್ವಲ್ಪ ಹಾಕಿ”, ಎಂದೆ.



“ಸ್ವಲ್ಪ ಈರುಳ್ಳಿ ಹೆಚ್ಚಿಕೊಡುತ್ತೀಯಾ?” ಎಂದರು. “ಇಲ್ಲ... ಅದನ್ನು ಹೆಚ್ಚಿದರೆ ಕಣ್ಣಲ್ಲಿ ನೀರು ಬರುತ್ತದೆ.” ಎಂದು ಹೇಳಿದೆ. ಮೂರು ಈರುಳ್ಳಿ ತಾನೇ ತೆಗೆದು, ತೊಳೆದು, ಸಿಪ್ಪೆ ತೆಗೆಯತೊಡಗಿದರು. ಅಷ್ಟರಲ್ಲಿ ಪಕ್ಕದ ಮನೆಯ ಸರಳಕ್ಕ ಮನೆ ಬಾಗಿಲ ಆಚೆ ಅಮ್ಮನನ್ನು ಮಾತನಾಡಿಸಲು ಬಂದರು. ಅವರು “ನನ್ನ ತಂಗಿ ಎಂತಾ ಕೆಲಸ ಮಾಡಿದಳು ಗೊತ್ತಾ? ಈರುಳ್ಳಿ, ಮತ್ತು ಟೊಮ್ಯಾಟೋಗಳನ್ನು ಸಾಬೂನು ಹಾಕಿ ತೊಳೆದುಬಿಟ್ಟಳು. ಅವಳಿಗೆ ತುಂಬಾ ಭಯ. ಊಟದಲ್ಲೆಲ್ಲ ಬರೀ ಸಾಬೂನು ವಾಸನೆ” ಎಂದರು. ನಾನು ಆ ದೃಶ್ಯವನ್ನು ಕಲ್ಪಿಸಿಕೊಂಡು ಜೋರಾಗಿ ನಕ್ಕುಬಿಟ್ಟೆ.

“ಬ್ಯಾಕ್ಟೀರಿಯ ತರಹ ಈ ವೈರಸ್ ತರಕಾರಿ ಮೇಲೆ ಬೆಳೆಯೋಲ್ಲ; ಇದ್ದರೂ ಕುದಿಸಿದಾಗ ಹೇಗೂ ಸತ್ತು ಹೋಗುತ್ತವೆ.” ಎಂದು ಅಮ್ಮ ಸರಳಕ್ಕಾಗೆ ವಿವರಿಸಿದರು. ಅದು ನನಗೂ ಗೊತ್ತಿತ್ತು. “ಆದರೆ ಈ ತರಕಾರಿಗಳನ್ನು ಮಾರುಕಟ್ಟೆಯಲ್ಲಿ ಹರಡಿ ಇಟ್ಟಿರುತ್ತಾರೆ. ಹೆಚ್ಚು ಕಡಿಮೆ ಎಲ್ಲರೂ ಮುಟ್ಟಿರುತ್ತಾರೆ ಅಲ್ಲವೇ?” ಎಂದು ನಾನು ಕೇಳಿದೆ. “ಹೌದು ಪುಟ್ಟ”, ಅಮ್ಮ ನನ್ನನ್ನು ನೋಡಿ ನಗುತ್ತಾ ಹೇಳಿದರು “ಅದಕ್ಕೆಯೇ ನೆನ್ನೆ ನಿನ್ನ ಅಣ್ಣ ತರಕಾರಿಗಳನ್ನು ಮನೆಗೆ ತಂದ ತಕ್ಷಣವೇ ತೊಳೆದಿಟ್ಟಿದ್ದೆ. ಆಮೇಲೆ . . .” ಎಂದು ಮುಂದುವರೆಸಿದಾಗ ನಾನು ಅಮ್ಮ ಇಬ್ಬರೂ ಒಟ್ಟಿಗೇ ಮಂತ್ರ ಹೇಳುವಂತೆ “ಸಾಬೂನು ಹಾಕಿ 20 ಸೆಕೆಂಡು ಕೈ ತೊಳೆದುಕೊಂಡೆ”.



ಈಗ ಸರಳಕ್ಕನ ಗಮನ ಅಪ್ಪನ ಕಡೆ ಹರಿಯಿತು. “ಆಹಾ! ನಿಮ್ಮ ವಿಶೇಷ ಚಿಕನ್ ಕರಿ ತಯಾರಿ ನಡೆದಹಾಗಿದೆ! ಆದರೆ ನಿಮಗೆ ಗೊತ್ತಾ? ವಾಟ್ಸಾಪ್ ನಲ್ಲಿ ಈ ವೈರಸ್ ಮೊದಲು ಪ್ರಾಣಿಗಳಿಂದ ಬಂದಿದ್ದು ಎಂದು ಓದಿದೆ.ಇದನ್ನು ತಿನ್ನುವುದು ಸುರಕ್ಷಿತವೇ?” ಎಂದು ಕೇಳಿದರು. ಅಪ್ಪ ಅದಕ್ಕೆ ಜೋರಾಗಿ ತಲೆ ಅಲ್ಲಾಡಿಸಿ “ತಪ್ಪು ತಪ್ಪು.  ಈ ವೈರಸ್ ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ. ಕೋಳಿ, ಮಾಂಸ ಇವುಗಳಿಂದ ಅಲ್ಲ; ನಾನು ಡಾಕ್ಟರನ್ನೂ ಕೇಳಿ ಖಾತ್ರಿ ಮಾಡಿಕೊಂಡೆ.” ಎಂದು ವಿವರಿಸಿದರು. ದೇವರು ಒಳ್ಳೆಯದನ್ನು ಮಾಡಲಿ ಎಂದು ನಾನು ಮನಸ್ಸಲ್ಲೇ ಯೋಚಿಸಿದೆ.ಅದೇ ಹೊತ್ತಿಗೆ ಸರಳಕ್ಕನ ಮಗಳು ಅಮ್ಮಾ ಎಂದು ಕೂಗಿದಳು. ಬಂದೇ ಎಂದು ಕೂಗಿಕೊಂಡು ಸರಳಕ್ಕ ಹೊರಟುಹೋದರು.

ಅಷ್ಟರಲ್ಲಿ ಶೇಖರಣ್ಣ ಅಂಗಡಿಯಿಂದ ಬಂದರು. ಅಕ್ಕಿ, ಬೇಳೆ, ಜೊತೆಗೆ ನನಗೋಸ್ಕರ ಕ್ರೀಂ ಬಿಸ್ಕತ್ ತರಲು ಅಮ್ಮ ಅವರನ್ನು ಕಳುಹಿಸಿದ್ದಳು.  ಅವರು ಮುಂದೆ ಏನು ಮಾಡಬೇಕೆಂದು ತಿಳಿಯದೇ ಬಾಗಿಲಲ್ಲೇ ನಿಂತರು. “ಏನು ಯೋಚಿಸುತ್ತಿರುವೆ? ಅಲ್ಲೇ ಇರು” ಎಂದು ಅಮ್ಮ ನಕ್ಕಿದರು. ಅಮ್ಮ ಅಡುಗೆ ಮನೆಯಿಂದ ಅಕ್ಕಿ, ಬೇಳೆಗೆ ಬಳಸುವ ಖಾಲಿ ಡಬ್ಬಗಳನ್ನು ಮತ್ತು ಖಾಲಿ ಟಿನ್ನನ್ನು ತಂದು ಬಾಗಿಲಲ್ಲಿ ಇಟ್ಟರು. ಅಮ್ಮ ಆ ಡಬ್ಬಗಳನ್ನು ತೆಗೆದು, ಶೇಖರಣ್ಣನಿಗೆ ಅಕ್ಕಿ, ಬೇಳೆಯ ಪ್ಲಾಸ್ಟಿಕ್ ಪೊಟ್ಟಣಗಳನ್ನು ತೆಗೆಯಲು ಹೇಳಿದರು.“ಈಗ ಒಂದೊಂದೇ ಸಾಮಾನು ತೆಗೆದು ಡಬ್ಬಕ್ಕೆ ಹಾಕು. ಡಬ್ಬ ಮುಟ್ಟದ ಹಾಗೆ ಹಾಕು” ಎಂದರು. “ನಿಧಾನ; ಜೋಪಾನ, ನೆಲದ ಮೇಲೆ ಬೀಳದಂತೆ ಹಾಕು” ಎಂದು ಹೇಳಿದರು. ನಾನು ಮನಸ್ಸಲ್ಲೇ ನಕ್ಕು ಶೇಖರಣ್ಣ ಎಚ್ಚರಿಕೆಯಿಂದ ಅಕ್ಕಿಯನ್ನು ಸುರಿಯುವುದನ್ನು ನೋಡಿದೆ. ಇನ್ನೊಂದು ಟಿನ್ ನಲ್ಲಿ ಬಿಸ್ಕತ್ತುಗಳನ್ನು ಡಬ್ಬಿ ಮುಟ್ಟದಂತೆ ಹಾಕಿದರು. ಆಮೇಲೆ ದಿಗ್ವಜಯ ಸಾಧಿಸಿದವನ ಹಾಗೆ ಹೆಹ್ಹೆಹ್ಹೆ ಎಂದು ನಗುತ್ತಾ ನಿಂತರು. ನಾವೆಲ್ಲಾ ಅವರೊಂದಿಗೆ ನಕ್ಕೆವು. ಆಗ ನನಗೆ ಬೆಳಗ್ಗೆ ಸರಳಕ್ಕ ಕೊಟ್ಟ ಸಾರನ್ನು ಅಮ್ಮ ಹೀಗೆ ಪಾತ್ರೆಗೆ ಹಾಕಿಸಿಕೊಂಡದ್ದನ್ನು ನೋಡಿದ ನೆನಪಾಯಿತು.



“ಈ ಪ್ಲಾಸ್ಟಿಕ್ ಮತ್ತು ಪೇಪರನ್ನು ಏನು ಮಾಡಲಿ?” ಎಂದು ಶೇಖರಣ್ಣ ಅಮ್ಮನನ್ನು ಕೇಳಿದರು. ಅದಕ್ಕೆ ಅಮ್ಮ ಅವೆಲ್ಲವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಹೊರಗಿರುವ ಕಸದಬುಟ್ಟಿಯಲ್ಲಿ ಎಸೆಯಲು ಹೇಳಿದರು. ನಂತರ ಶೇಖರಣ್ಣ ಚಪ್ಪಲಿಗಳನ್ನು ಆಚೆಯೇ ಬಿಟ್ಟು ಮನೆಯೊಳಗೆ ಬಂದರು. ನಾನು “20 ಸೆಕೆಂಡುಗಳ ಕಾಲ ಕೈ ತೊಳೆಯಬೇಕು” ಎಂದು ಜಪಿಸುತ್ತಾ ಶೇಖರಣ್ಣ ಕೈ ತೊಳೆಯುವವರೆಗೂ ಅವರ ಹಿಂದೆಯೇ ಓಡಾಡುತ್ತಿದ್ದೆ. ಆಮೇಲೆ ಅವರು ಬಟ್ಟೆ ಬದಲಾಯಿಸಲು ಹೋದರು.

ಅಪ್ಪ ಅಡುಗೆ ಮನೆಯಲ್ಲಿ ಆಗಲೇ ಕೆಲಸ ಆರಂಭಿಸಿಬಿಟ್ಟಿದ್ದರು. ಅವರು ಪಾತ್ರೆಗಳು, ಒಲೆ, ಲೈಟರ್ ಎಲ್ಲವನ್ನು ಶುಭ್ರವಾಗಿ ಸಾಬೂನಿನಿಂದ ತೊಳೆದಿದ್ದರು. ಘಮ ಘಮ ಎಂದು ಇಂಗು, ಕರಿಬೇವಿನ ಒಗ್ಗರಣೆ ಪರಿಮಳ ಮನೆಯಲ್ಲಾ ವ್ಯಾಪಿಸಿತು. ಒಗ್ಗರಣೆಗೆ ಚಿಕನ್ನನ್ನು ಹಾಕಿ, ಟೀವಿಯ ಮುಂದೆ ಸೀರಿಯಲ್ಲನ್ನು ನೋಡುತ್ತಿದ್ದ ಅಮ್ಮನಿಗೆ “ಪಕ್ಕದ ಮನೆ ಜೇಕಬ್ ನ ವಿಚಾರ ಕೇಳಿದೆಯಾ? ಅವನಿಗೆ ಕಳೆದ ವಾರದಿಂದ ಕೆಮ್ಮು ನೆಗಡಿ ಜೊತೆಗೆ ಜ್ವರವೂ ಇತ್ತಂತೆ” ಎಂದರು ಅಪ್ಪ.

“ಹೌದಾ? ಅವನ ಕುಟುಂಬದವರು ಎಷ್ಟು ಹೆದರಿರಬೇಕು! ಹೋಗಿ ನೋಡಿಕೊಂಡು ಬರೋಣವೇ?” ಎಂದುರು ಶೇಖರಣ್ಣ. ಅದಕ್ಕೆ ಅಮ್ಮ, “ಬೇಡ; ಬೇಡ; ಅವರನ್ನು ಈಗ ಬೇರೆಯಾಗಿ ಇರಿಸಿರುತ್ತಾರೆ; ಅದಕ್ಕೆ ಕ್ವಾರಂಟೈನ್ ಅಂತಾರೆ.” ಎಂದರು. ಹಾಗಾದರೆ ಅವರು ಹೇಗೆ ಊಟ ಮಾಡುತ್ತಾರೋ ಎಂದುಕೊಂಡೆ ನಾನು. “ಅಮ್ಮ. ಅವರಿಗೆ ಯಾರಾದರೂ ಚಿಕನ್ ಕರಿ ಮಾಡಿಕೊಡುತ್ತಾರಾ?” ಅಂದೆ. “ಹೌದು ಪುಟ್ಟ, ಕೊಡತ್ತಾರೆ. ಆದರೆ ಬಹಳ ಎಚ್ಚರಿಕೆಯಿಂದ ಇರಬೇಕು. ಅವರು ತನ್ನ ಕೋಣೆಯೊಳಗೇ ಇರಬೇಕು; ಅವರಿಗೆ ಯಾರಾದರು ಆಹಾರವನ್ನು ತೆಗೆದುಕೊಂಡು ಹೋಗಬೇಕು. ಮತ್ತು ಅವರು ತಿಂದ ನಂತರ ತಟ್ಟೆಯನ್ನು ತೊಳೆಯಬೇಕು” ಎಂದರು ಅಮ್ಮ.ಅವರು ಬೇಗ ಹುಷಾರಾಗಲಿ ಎಂದು ಬೇಡಿಕೊಂಡೆ. ನನಗೆ ಗಾಳಿಪಟ ಹಾರಿಸುವುದನ್ನು ಕಲಿಸುತ್ತೇನೆ ಎಂದು ಹೇಳಿದ್ದನ್ನು ನೆನೆಸಿಕೊಂಡೆ.

“ಅಡಿಗೆ ತಯಾರಾಗಿದೆ” ಎಂದರು ಅಪ್ಪ. ಎಲ್ಲರಿಗೂ ಕೈ ತೊಳೆಯಲು ಹಾಗೂ ತಟ್ಟೆಗಳನ್ನೂ ತೊಳೆಯಲು ಹೇಳಿದರು ಅಪ್ಪ. ಅವರು ತಟ್ಟೆಗೆ ಅನ್ನ ಮತ್ತು ಚಿಕನ್ ಕರಿ ಬಡಿಸಿದರು. “ಅಪ್ಪಾ ನೀನು ತಿನ್ನೋಲ್ಲವೇ?” ಎಂದೆ



“ಒಂದೇ ನಿಮಿಷ”  ಎಂದು ಅಪ್ಪ ಮೂಗನ್ನು ರಪ ರಪ ಉಜ್ಜಿಕೊಂಡರು. “ಅಷ್ಟು ಹೊತ್ತಿನಿಂದಲೂ ನವೆ ಆಗುತ್ತಿತ್ತು; ಆದರೆ ಅಡುಗೆ ಮಾಡುವಾಗ ಕೆರೆದುಕೊಳ್ಳಬಾರದಲ್ಲ. ಮುಗಿಸಲು ಕಾಯುತ್ತಿದ್ದೆ.” ಎಂದಾಗ  ಎಲ್ಲರೂ ಜೋರಾಗಿ ನಕ್ಕೆವು. ಪುನಃ ಕೈತೊಳೆಯಲು ಹೋದರು. ಎಲ್ಲರೂ ಒಂದು ಮೀಟರ್ ದೂರದಲ್ಲಿ ಕುಳಿತು, ಜಗತ್ತಿನ ಅತ್ಯುತ್ತಮವಾದ ಚಿಕನ್ ಕರಿಯನ್ನು ತಿಂದೆವು.

ಇಲ್ಲಿ ಚಿತ್ರಿಸಿರುವ ಸನ್ನಿವೇಶಗಳು ಕೇವಲ ಕಾಲ್ಪನಿಕ ಮತ್ತು ಸಾಂದರ್ಭಿಕವಾಗಿರುತ್ತವೆ. ಇವುಗಳಲ್ಲಿ ಬಹಳಷ್ಟನ್ನು ನಿರೂಪಣೆಗಾಗಿ ಸರಳೀಕರಿಸಲಾಗಿದೆ. ಇದರ ಸಂಪೂರ್ಣ ವೈಜ್ಞಾನಿಕ ನಿಖರತೆಗೆ ಈ ಲೇಖನಗಳೊಂದಿಗಿರುವ ಇತರೆ ಜಾಲತಾಣಗಳನ್ನು ಹಾಗೂ ಲೇಖನಗಳನ್ನು ನೋಡಿ.

